# ಪಕ್ಷಿಗಳ ಪ್ರಾಣ ತೆಗೆದ ಪಟಾಕಿ

ಮನೆಯಂಗಳದಲ್ಲಿ ಗೂಡುಕಟ್ಟಿದ್ದ ಹೂವಕ್ಕಿ ಆ ದಿನ ಸಂಭ್ರಮದಲ್ಲಿತ್ತು. ಸುಮಾರು 16 ದಿನಗಳ ಕಾಲ ಮೊಟ್ಟೆಗಳ ಮೇಲೆ ಕೂತು ಅದು ಮಾಡಿದ್ದ ತಪಸ್ಸು ಅಂದು ಫಲ ನೀಡಿತ್ತು. ಮಾಂಸಲಮುದ್ದೆಯಂತಿದ್ದ ಅತ್ಯಂತ ಸುಕೋಮಲ ದೇಹದ ಮರಿಗಳು ಪೋಷಕ ಹಕ್ಕಿಗಳ ಬದುಕಿಗೆ ಹೊಸ ಮೆರುಗು ತಂದಿದ್ದವು. ಮೊಟ್ಟೆಯಿಂದ ಹೊರಬಂದ ಈ ಮರಿಗಳಿಗೆ ಪೋಷಕ ಹಕ್ಕಿಗಳು ಆಹಾರದ ಜೊತೆಗೆ ಬೆಚ್ಚಗಿನ ಕಾವು ಕೊಡುತ್ತಾ ಮರಿಗಳ ದೇಹದ ಉಷ್ಣ ಹೊರಹೋಗದಂತೆ ಕಾಪಾಡುತ್ತಿದ್ದವು.

ಆದರೆ ಹಬ್ಬದ ದಿನ ಸಂಜೆ ಇದ್ದಕ್ಕಿದ್ದಂತೆ ರಸ್ತೆಯಲ್ಲಿ ಸಿಡಿದ ಪಟಾಕಿಗಳು ಹಕ್ಕಿಗಳ ಹಾಗೂ ನಮ್ಮ ಸಂಭ್ರಮವನ್ನು ಕಸಿದುಕೊಂಡವು. ಗೂಡಿನಲ್ಲಿ ಮರಿಗಳಿಗೆ ಬೆಚ್ಚನೆಯ ಕಾವು ಕೊಡುತ್ತಿದ್ದ ಹಕ್ಕಿಗೆ ಪಟಾಕಿಗಳ ಕರ್ಕಶ ಶಬ್ದ ಬರಸಿಡಿಲಂತೆ ಎರಗಿತು. ಕತ್ತಲಲ್ಲೇ ಗೂಡಿನಿಂದ ಹೊರಗೆ ಹಾರಿ ಸಿಕ್ಕ ಸಿಕ್ಕ ಕಂಬಕ್ಕೆ ಡಿಕ್ಕಿಸಿ ಹೇಗೋ ಹಾರಿಹೋಯಿತು. ಮರುದಿನ ಬೆಳಿಗ್ಗೆ ಗೂಡಿಗೆ ವಾಪಾಸು ಬಂದ ಹಕ್ಕಿಗಳು ಆತಂಕದಿಂದ ಗೂಡಿನ ಸುತ್ತ ಸುತ್ತುಬರುತ್ತಿದ್ದವು. ಅದೇ ಕೊನೆ ಮತ್ತೊಮ್ಮೆ ಅವು ಗೂಡಿಗೆ ಮರಳಲೇ ಇಲ್ಲ.

ಸಂಭ್ರಮದಿಂದ ತುಂಬಿದ್ದ ಗೂಡು ಸ್ವಲ್ಪ ದಿನಗಳಲ್ಲೇ ವಾರಸುದಾರರಿಲ್ಲದ ಪಾಳುಬಿದ್ದ ಮನೆಯಂತಾಗಿತ್ತು. ಗೂಡಿನಲ್ಲಿ ಮರಿಗಳಾದರೂ ಇವೆಯೋ ಅಥವಾ ಪೋಷಕ ಹಕ್ಕಿಗಳು ಅಷ್ಟು ಚಿಕ್ಕ ಮರಿಗಳನ್ನು ತಮ್ಮೊಂದಿಗೆ ಒಯ್ದಿವೆಯೋ ಎಂದು ನೋಡಲು ಗೂಡೊಳಗೆ ಇಣುಕಿದೆ. ಅಲ್ಲಿ ದುರಂತವೊಂದಕ್ಕೆ ಸಾಕ್ಷಿ ಮಾತ್ರ ಇತ್ತು. ಪಟಾಕಿಗಳ ಕರ್ಕಶ ಶಬ್ದ ಮರಿಗಳನ್ನು ಕೊಂದಿತ್ತು. ಇನ್ನೂ ಕಣ್ಬಿಡದ ಮರಿಗಳು ಶಾಶ್ವತವಾಗಿ ಕಣ್ಮುಚ್ಚಿದ್ದವು. ಒಂದು ಪುಟ್ಟ ಹಳ್ಳಿಯಲ್ಲಿ ಕೆಲವೇ ಮಾರುಗಳ ದೂರದಲ್ಲಿ ಸಿಡಿಯುವ ಪಟಾಕಿಯಿಂದ ಇಹಲೋಕ ತ್ಯಜಿಸಿದ ಮರಿಗಳನ್ನು ಕಂಡಾಗ ಪ್ರಪಂಚದಾದ್ಯಂತ ವಿವಿಧ ಹಬ್ಬ, ಮೆರವಣಿಗೆಗಳ ನೆಪದಲ್ಲಿ ಸಿಡಿಯುವ ಪಟಾಕಿಗಳು ಅದೆಷ್ಟು ಜೀವಿಗಳ (ಮನುಷ್ಯನ ಹೊರತಾಗಿ) ಬದುಕನ್ನು ಕಸಿಯುತ್ತಿವೆಯೋ ಎಂದೆನಿಸಿತು.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ









# ತಿಪ್ಪಮ್ಮನ ಪೂಜೆ

ಹಾಸನದ ಹಲವಾರು ಹಳ್ಳಿಗಳಲ್ಲಿ ದೀಪಾವಳಿಯ ದಿನ ಗ್ರಾಮಸ್ಥರು ಈಗಲೂ ಸಹ ತಿಪ್ಪಮ್ಮನ ಪೂಜೆಯನ್ನು ಸಾಂಪ್ರದಾಯಿಕವಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಕೋಳಿ ಕೂಗುವ ಹೊತ್ತಿಗೆ ಮಹಿಳೆಯರು ಮನೆಯಂಗಳವನ್ನು ತೊಳೆದು, ರಂಗೋಲಿ ಬಿಡಿಸಿ, ಸಗಣಿಯಿಂದ ಉಂಡೆ ಮಾಡಿ ಚೆಂಡು ಹೂ, ಉತ್ತರಾಣಿಕಡ್ಡಿ, ಸೋರೆ ಹೂ ಮುಡಿಸಿ ತಿಪ್ಪಮ್ಮನನ್ನು ಮಾಡುತ್ತಾರೆ. ಮಕ್ಕಳು ಕೂಗು ಹಾಕುವ ಕಾರ್ಯದಲ್ಲಿ ತಲ್ಲೀನರಾಗಿದ್ದರೆ, ಗಂಡಸರು ಕುಂಬಾರರ ಮನೆಯಿಂದ ತಂದಿರುವ ಬೂದಿಯನ್ನು ಹೊಲಕ್ಕೆ ಬಿಡಲು ತಯಾರಾಗುತ್ತಾರೆ. ಬರುವಾಗ ಹೊಲದ ಸುತ್ತಮುತ್ತಲಿರುವ ಒಂಬತ್ತು ಬಗೆಯ ಸೊಪ್ಪುಗಳನ್ನು (ಅಟಪಟ್ಟೆ) ತರುತ್ತಾರೆ.

ಸೂರ್ಯಾಸ್ತದ ಸಮಯಕ್ಕೆ ಸ್ವಚ್ಛಗೊಳಿಸಿ ಸಮತಟ್ಟು ಮಾಡಿರುವ ತಿಪ್ಪೆಯಲ್ಲಿ ಅಟಪಟ್ಟೆ ಸೊಪ್ಪಿನ ಕಂತೆಯನ್ನು ಚುಚ್ಚುತ್ತಾರೆ. ಮುಂಜಾವಿನಲ್ಲಿ ಬಾಗಿಲಿನ ಹೊಸ್ತಿಲಲ್ಲಿಟ್ಟಿರುವ ತಿಪ್ಪಮ್ಮನನ್ನು ಒಂದರ ಪಕ್ಕಕ್ಕೊಂದು ಜೋಡಿಸಿ ಮತ್ತೊಂದಿಷ್ಟು ಚೆಂಡು ಹೂಗಳನ್ನು ತೆಂಗಿನಕಡ್ಡಿಗೆ ಚುಚ್ಚಿ ಅಲಂಕರಿಸುತ್ತಾರೆ. ಇದರ ಮುಂದೆ ಬಾಳೆದೆಲೆ ಹರಡಿ ಅದಕ್ಕೆ ಸಪ್ಪೆ ಮೊಸರನ್ನ, ದೋಸೆ ಪಲ್ಯ, ದೀಪ, ಹಣ್ಣುಕಾಯಿ ಇಟ್ಟು ಪೂಜೆ ಸಲ್ಲಿಸುತ್ತಾರೆ.

–ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

# ಕಣ್ಮನ ಸೆಳೆಯುವ 'ಹೊಸದೇವತಾ'

ಉತ್ತರಕನ್ನಡ, 'ಜಲಪಾತಗಳ ಜಿಲ್ಲೆ' ಎಂದೇ ಖ್ಯಾತಿಗೊಂಡಿದೆ. ಜಿಲ್ಲೆಯಾದ್ಯಂತ ಮಳೆಗಾಲದಲ್ಲಿ ಅಗಣಿತ ಜಲಪಾತಗಳು ಸೃಷ್ಟಿಗೊಳ್ಳುತ್ತವೆ. ಅಂಥವುಗಳಲ್ಲಿ ಹೆಚ್ಚು ಪ್ರಸಿದ್ಧಿ ಪಡೆಯದ, ಹಸಿರ ಸಿರಿಯ ನಡುವಿನ ಅತ್ಯಾಕರ್ಷಕ ಗುಪ್ತತಾಣವಾಗಿ ಉಳಿದಿರುವ ಜಲಪಾತಗಳ ಪೈಕಿ 'ಹೊಸದೇವತಾ' ಸಹ ಒಂದು. ಇದು ಅಂಕೋಲಾ ತಾಲ್ಲೂಕಿನ ವಾಸರ ಕುದ್ರಿಗೆ ಸಮೀಪದಲ್ಲಿದೆ.

'ಮೇಲಿನಗುಳಿ'ಯೆಂಬ ಹಳ್ಳವೇ ವರ್ಷಾಕಾಲದಲ್ಲಿ ಮೈದುಂಬಿ ಬಂಡೆಕಲ್ಲುಗಳ ಮೇಲಿಂದ ಧುಮುಕುತ್ತಾ ಇಲ್ಲಿ ಜಲಪಾತ ಸೃಷ್ಟಿಸುತ್ತಿದೆ. ಜಲಪಾತದ ಪಕ್ಕದಲ್ಲೇ ಹೊಸದೇವತೆಯ ಮಂದಿರವಿರುವುದರಿಂದ ಇದಕ್ಕೆ ಈ ಹೆಸರು ಬಂದಿದೆ ಎಂಬುದು ಸ್ಥಳೀಯರ ಮಾತು. ಹೊರಜಗತ್ತಿಗೆ ಅಷ್ಟೇನೂ ಪರಿಚಯವಿಲ್ಲದ ಈ ಜಲಪಾತವು ಪ್ರಕೃತಿಪ್ರಿಯರ ರೀಲ್ಸ್‌ಗಳ ಸುಳಿಗೆ ಸಿಲುಕಿ ಈಚೆಗೆ ಹೆಚ್ಚು ಪ್ರಸಿದ್ಧಿಗೊಂಡಿದೆ.

ಬಂಡೆಕಲ್ಲುಗಳ ಮೇಲಿಂದ ಮೂರ್ನಾಲ್ಕು ಹಂತಗಳಲ್ಲಿ ಬಿಳಿ ಹಾಲ ನೊರೆಯೋಪಾದಿ ಜುಳು ಜುಳು ಎಂದು ಸಾಗುತ್ತಾ